# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 261
ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 15.02.2023
ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಲೋಕೋಪಯೋಗಿ ಇಲಾಖೆ, ಜಲ ಸಂಪನ್ಮೂಲ ಇಲಾಖೆ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳನ್ನು ಬೇರ್ಪಡಿಸುವ ಪ್ರಕ್ರಿಯೆ ಪೂರ್ಣ ಗೊಂಡಿದೆಯೇ: ಹಾಗಿದಲ್ಲಿ ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು. | ಹೌದು.<br>ಲೋಕೋಪಯೋಗಿ, ಜಲ ಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಅಧಿಕಾರಿ / ನೌಕರರುಗಳ ಸೇವಾ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಇಲಾಖೆಗಳಾಗಿ ಬೇರ್ಪಡೆಗೊಂಡಿದ್ದು, ಸದರಿ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇಂಜಿನಿಯರ್ / ಅಪಿಕ ವರ್ಗದ ಅಧಿಕಾರಿ / ಸಿಬ್ಬಂದಿಗಳನ್ನು ಸಹಾ ಬೇರ್ಪಡಿಸುವ ಕುರಿತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಲೋಕೋಪಯೋಗಿ ಇಲಾಖೆಯು ರಚಿಸಿದ 19 ಅಧಿಕಾರಿ/ ಸದಸ್ಯರುಗಳನ್ನೊಳಗೊಂಡ ತಜ್ಞರ ಸಮಿತಿಯ ತೀರ್ಮಾನದ ಮೇರೆಗೆ ಜಲ ಸಂಪನ್ಮೂಲ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಗಳ ಅಧಿಕಾರಿ/ನೌಕರರನ್ನು ಶಾಶ್ವತವಾಗಿ ವರ್ಗಾವಣೆ ಮಾಡಲು ಆನ್‌ಲೈನ್ ಮೂಲಕ ಅಭಿಮತಗಳನ್ನು ಪಡೆದು, ಅದರನುಸಾರ ಅಭಿಮತ ಸಲ್ಲಿಸಿದ ಇಲಾಖೆಗಳಿಗೆ ವಿಲೀನಾತಿಗೊಳಿಸಿ ಈ ಕೆಳಕಂಡ ಅಧಿಸೂಚನೆಗಳನ್ನು ಹೊರಡಿಸಲಾಗಿದೆ.<br>1. ಲೋಇ 216 ಸೇಸಕಿ 2018 (1), ದಿ: 17.10.2020 (ಅಧೀಕ್ಷಕ ಇಂಜಿನಿಯರ್ ವೃಂದ)<br>2. ಲೋಇ 216 ಸೇಸಕಿ 2018 (2), ದಿ: 17.10.2020 (ಕಾರ್ಯಪಾಲಕ ಇಂಜಿನಿಯರ್ ವೃಂದ)<br>3. ಲೋಇ 216 ಸೇಸಕಿ 2018 (3), ದಿ: 17.10.2020 (ಸ.ಕಾ.ಇಂಜಿನಿಯರ್ (ವಿ-1) ವೃಂದ)<br>4. ಲೋಇ 216 ಸೇಸಕಿ 2018 (4), ದಿ: 17.10.2020 (ಸ.ಕಾ.ಇಂಜಿನಿಯರ್ (ವಿ-2) ವೃಂದ)<br>5. ಮು.ಇಂ., ಸಂ.ಕ. (ದ.), ಬೆಂ. ಇವರ ಅಧಿಸೂಚನೆ ದಿ: 17.10.2020 (ಸ.ಇಂ. (ವಿ-1) ವೃಂದ)<br>6. ಮು.ಇಂ., ಸಂ.ಕ. (ದ.), ಬೆಂ. ಇವರ ಅಧಿಸೂಚನೆ ದಿ: 17.10.2020 (ಸ.ಇಂ. (ವಿ-2) ವೃಂದ)<br>7. ಮು.ಇಂ., ಸಂ.ಕ. (ದ.), ಬೆಂ. ಇವರ ಅಧಿಸೂಚನೆ ದಿ: 17.10.2020 (ಕಿ.ಇಂ. ವೃಂದ)<br>8. ಅಪಿಕ ವರ್ಗದ ಗ್ರೂಪ್ 'ಬಿ' ವೃಂದದಿಂದ ಗ್ರೂಪ್ 'ಡಿ' ವೃಂದದವರೆಗೆ ಮು.ಇಂ., ಸಂ.ಕ. (ದಕ್ಷಿಣ), ಬೆಂ. ಇವರ ಅಧಿಸೂಚನೆ ದಿ: 06.11.2020 |

| | | |
|---|---|---|
| ಆ | ಸದರಿ ಇಲಾಖೆಗಳನ್ನು ಬೇರ್ಪಡಿಸುವ ಸಂದರ್ಭದಲ್ಲಿ ಅಧಿಕಾರಿ/ಸಿಬ್ಬಂದಿಗಳು ಇಚ್ಛಾಪತ್ರಗಳನ್ನು ನೀಡದ ಪ್ರಕರಣಗಳಲ್ಲಿ ಈ ಮೂರು ಇಲಾಖೆಗಳಲ್ಲಿ ಏಕರೂಪದ ನಿಯಮ ಅನುಸರಿಸಲಾಗಿದೆಯೇ; | **<u>ಲೋಕೋಪಯೋಗಿ ಇಲಾಖೆಯ ಉತ್ತರ:</u>**<br>ಇಲಾಖೆಗಳನ್ನು ಬೇರ್ಪಡಿಸುವ ಸಂದರ್ಭದಲ್ಲಿ ಅಧಿಕಾರಿ / ಸಿಬ್ಬಂದಿಗಳು ಇಚ್ಛಾ ಪತ್ರಗಳನ್ನು ನೀಡದ ಪ್ರಕರಣಗಳಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ನೇಮಕಾತಿ ಹೊಂದಿರುವ ಅಧಿಕಾರಿ / ಸಿಬ್ಬಂದಿಗಳ ಬಗ್ಗೆ ನೇಮಕಾತಿ ಆದೇಶ ಹಾಗೂ ಮೂಲ ಸೇವಾ ಪುಸ್ತಕವನ್ನು ಪರಿಶೀಲಿಸಿಕೊಂಡು ಲೋಕೋಪಯೋಗಿ ಇಲಾಖಾ ನೌಕರರೆಂದು ಪರಿಗಣಿಸಲಾಗುತ್ತಿದೆ.<br>**<u>ಜಲಸಂಪನ್ಮೂಲ ಇಲಾಖೆಯ ಉತ್ತರ:</u>**<br>ಜಲಸಂಪನ್ಮೂಲ ಇಲಾಖೆಗೆ ಸೇವೆಗೆ ಅಭಿಮತ ಸಲ್ಲಿಸಿದ ಅಧಿಕಾರಿ/ಸಿಬ್ಬಂದಿಗಳ ಸೇವೆಯನ್ನು ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಿ ದಿನಾಂಕ: 03.02.2021, 03.03.2021, 17.03.2021 ಹಾಗೂ 18.11.2021 ರಲ್ಲಿ ಅಧಿಸೂಚಿಸಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.<br>ಬ್ಯಾಕ್‌ಲಾಗ್ ಇಂಜಿನಿಯರುಗಳಿಗೆ ಸಂಬಂಧಿಸಿದಂತೆ ದಿನಾಂಕ: 31.01.2004 ಹಾಗೂ ಅದಕ್ಕೂ ಪೂರ್ವದಲ್ಲಿ ನೇಮಕಗೊಂಡವರಿಗೆ ಹಾಗೂ ಉಳಿದ ಅಧಿಕಾರಿ / ಸಿಬ್ಬಂದಿಗೆ ಸಂಬಂಧಿಸಿದಂತೆ ದಿನಾಂಕ: 31.12.2003 ಹಾಗೂ ಅದಕ್ಕೂ ಪೂರ್ವದಲ್ಲಿ ನೇಮಕಗೊಂಡವರಿಗೆ ಜಲ ಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ವಿಲೀನಗೊಳ್ಳಲು ಇಚ್ಛಾಪತ್ರ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಇಚ್ಛಾ ಪತ್ರ ಸಲ್ಲಿಸದವರನ್ನು ಜಲಸಂಪನ್ಮೂಲ ಇಲಾಖೆಯ ಸೇವೆಗೆ ವಿಲೀನಗೊಳಸಲು ಪರಿಗಣಿಸಿರುವುದಿಲ್ಲ.<br>ಉಳಿದಂತೆ, ದಿನಾಂಕ: 31.12.2003 ರ ನಂತರ ಜಲಸಂಪನ್ಮೂಲ ಇಲಾಖೆಯಲ್ಲಿ ನೇಮಕಗೊಂಡ ಎಲ್ಲಾ ಅಧಿಕಾರಿ/ಸಿಬ್ಬಂದಿಗಳು ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲೇ ಮುಂದುವರೆದಿರುತ್ತಾರೆ.<br>**<u>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಉತ್ತರ:</u>**<br>ಇಲಾಖಾ ಬೇರ್ಪಡಿಸುವ ಸಂದರ್ಭದಲ್ಲಿ ಇಚ್ಛಾಪತ್ರ ಸಲ್ಲಿಸದ ಅಧಿಕಾರಿ/ಸಿಬ್ಬಂದಿಗಳು ಮಾತೃ ಇಲಾಖೆಯಲ್ಲಿಯೇ ಮುಂದುವರೆದಿರುತ್ತಾರೆ. |
| ಇ | ಈ ಇಲಾಖೆಗಳನ್ನು ಬೇರ್ಪಡಿಸುವ ಸಂದರ್ಭದಲ್ಲಿ ಇಚ್ಛಾಪತ್ರ ಸಲ್ಲಿಸದ ಅಧಿಕಾರಿ/ಸಿಬ್ಬಂದಿಗಳ ಬಡ್ತಿಯನ್ನು ತಡೆ ಹಿಡಿದಿರುವ ಪ್ರಕರಣಗಳು ಇವೆಯೇ;(ಮೂರು ಇಲಾಖೆಗಳ ಇಲಾಖಾವಾರು ವಿವರ ನೀಡುವುದು) | **<u>ಲೋಕೋಪಯೋಗಿ ಇಲಾಖೆಯ ಉತ್ತರ:</u>**<br>ಇಲಾಖೆಗಳ ಬೇರ್ಪಡೆ ನಂತರ ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಲ್ಲಿ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲಾಗಿದ್ದು, ಸದರಿ ಅಂತಿಮ ಜೇಷ್ಠತಾ ಪಟ್ಟಿಯನುಸಾರ ಜಲಸಂಪನ್ಮೂಲ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜೇಷ್ಠತೆಯಲ್ಲಿನ ಅಧಿಕಾರಿಗಳನ್ನು ಹೊರತುಪಡಿಸಿ ಲೋಕೋಪಯೋಗಿ ಇಲಾಖೆಯ ಅಂತಿಮ ಜೇಷ್ಠತಾ ಪಟ್ಟಿಯ ಜೇಷ್ಠತೆಯನುಸಾರ ಅಧಿಕಾರಿಗಳಿಗೆ ಬಡ್ತಿ ನೀಡಲಾಗುತ್ತಿದೆ |

| | | |
|---|---|---|
| | | **ಜಲಸಂಪನ್ಮೂಲ ಇಲಾಖೆಯ ಉತ್ತರ:**<br>ಜಲಸಂಪನ್ಮೂಲ ಇಲಾಖೆಯಲ್ಲಿ ಇಲಾಖಾ ಬೇರ್ಪಡಿಕೆ ಕಾರ್ಯ ಪೂರ್ಣಗೊಂಡ ನಂತರ, ಜಲ ಸಂಪನ್ಮೂಲ ಇಲಾಖೆಯಲ್ಲಿ ಸಿದ್ಧಪಡಿಸಲಾದ ಜೇಷ್ಠತಾ ಪಟ್ಟಿಯನ್ನು ಆಧರಿಸಿ ಜಲ ಸಂಪನ್ಮೂಲ ಇಲಾಖೆಯ ಖಾಲಿ ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 32 ರಡಿ ಸ್ವತಂತ್ರ ಪ್ರಭಾರದಲ್ಲಿ ಇಡಲು/ನಿಯಮ 42ರಡಿ ಸ್ಥಾನಪನ್ನಗೊಳಿಸಲು ಕ್ರಮ ವಹಿಸಲಾಗಿದೆ.<br>**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಉತ್ತರ:**<br>ಅಂತಹ ಯಾವುದೇ ಪ್ರಕರಣ ಇರುವುದಿಲ್ಲ. |
| ಈ | ಸದರಿ ಮೂರು ಇಲಾಖೆಗಳಲ್ಲಿನ ಪ್ರಥಮ ದರ್ಜೆ ಲೆಕ್ಕ ಸಹಾಯಕರ ಹುದ್ದೆಯಿಂದ ಲೆಕ್ಕ ಅಧೀಕ್ಷಕರ ಹುದ್ದೆಗೆ ಬಡ್ತಿ ನೀಡುವ ಸಂದರ್ಭದಲ್ಲಿ ಏಕ ರೂಪದ ನಿಯಮ ಅನುಸರಿಸಲಾಗಿದೆಯೇ:ಇಚ್ಛಾಪತ್ರ ಸಲ್ಲಿಸದ ಕಾರಣಕ್ಕಾಗಿ ಯಾವ ಇಲಾಖೆಯಲ್ಲಿ ಬಡ್ತಿ ತಡೆಹಿಡಿಯಲಾಗಿದೆ?(ವಿವರ ನೀಡುವುದು) | ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಲ್ಲಿ ಪ್ರತ್ಯೇಕವಾಗಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿರುತ್ತದೆ ಹಾಗೂ ಇಲಾಖೆಗಳ ಬೇರ್ಪಡೆ ನಂತರ ಆಯಾಯಾ ವೃಂದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಜೇಷ್ಟತಾ ಪಟ್ಟಿಗಳನ್ನು ಪ್ರಕಟಿಸಲಾಗಿರುತ್ತದೆ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಆಯಾ ಇಲಾಖೆಗಳ ಹಂತದಲ್ಲಿ ನೌಕರರ ಜೇಷ್ಟತೆ ಹಾಗೂ ಅರ್ಹತೆಯನ್ನು ಪರಿಗಣಿಸಿ ಖಾಲಿ ಇರುವ ಹುದ್ದೆಗಳು ಹಾಗೂ ನಿಯೋಜನಾ ಹುದ್ದೆಗಳನ್ನು ಗಣನೆಗೆ ತೆಗೆದುಕೊಂಡು ಪ್ರಥಮ ದರ್ಜೆ ಲೆಕ್ಕ ಸಹಾಯಕರ ಹುದ್ದೆಯಿಂದ ಲೆಕ್ಕ ಅಧೀಕ್ಷಕರ ಹುದ್ದೆಗೆ ಬಡ್ತಿ ನೀಡಲು ಕ್ರಮವಹಿಸಲಾಗುತ್ತಿದೆ.<br>ಇಚ್ಛಾಪತ್ರ ಸಲ್ಲಿಸದ ಕಾರಣಕ್ಕಾಗಿ ಯಾವುದೇ ಸಿಬ್ಬಂದಿಗಳ ಬಡ್ತಿಯನ್ನು ತಡೆಹಿಡಿದಿರುವ ಪ್ರಕರಣಗಳು ಇರುವುದಿಲ್ಲ. |

**ಸಂಖ್ಯೆ: ಲೋಇ 17 ಸೇಇಸಿ 2023**

**(ಸಿ.ಸಿ. ಪಾಟೀಲ್)**
**ಲೋಕೋಪಯೋಗಿ ಸಚಿವರು**